# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು – 560003

# KARNATAKA SCHOOL EXAMINATION AND ASSESSMENT BOARD

Malleshwaram Bengaluru-560003

## 2026-27 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ

## S.S.L.C MODEL QUESTION PAPER - 04 : 2026-27

ವಿಷಯ : ದ್ವಿತೀಯ ಭಾಷೆ ಕನ್ನಡ

**SUBJECT : Second Language Kannada**

ಸಮಯ : 3 ಗಂಟೆ | ವಿಷಯ ಸಂಕೇತ : **33K**

ಗರಿಷ್ಠ ಅಂಕಗಳು : 80 | **Subject Code : 33K**

ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆ ಪತ್ರಿಕೆಯು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I.** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. **4x1=4**

1. ಕನ್ನಡ ವರ್ಣಮಾಲೆಯ ಹ್ರಸ್ವ ಸ್ವರಾಕ್ಷರಗಳು ಇವು:
   ಎ) ಆ, ಈ, ಊ
   ಬಿ) ಅ, ಎ, ಒ
   ಸಿ) ಣ, ನ, ಮ
   ಡಿ) ಯ, ಶ, ಲ
2. ನಾಮ ಪದಗಳಿಗೆ ಬದಲಾಗಿ ಬಳಸುವ ಪದಗಳಿಗೆ ಹೀಗೆನ್ನುವರು:
   ಎ) ಸರ್ವನಾಮ
   ಬಿ) ನಾಮಪ್ರಕೃತಿ
   ಸಿ) ಭಾವನಾಮ
   ಡಿ) ವಿಭಕ್ತಿ
3. ಇವುಗಳಲ್ಲಿ ಅನ್ಯದೇಶ್ಯ ಪದವಿದು
   ಎ) ಮನೆ
   ಬಿ) ಟಿಕೇಟ್
   ಸಿ) ಅರಣ್ಯ
   ಡಿ) ಕೊಡಲಿ
4. ಮೈಕೊಡವಿ ಪದದ ವಿಗ್ರಹ ರೂಪವಿದು
   ಎ) ಮೈ + ಕೊಡವಿ
   ಬಿ) ಮೈಯಿಂದ + ಕೊಡವಿ
   ಸಿ) ಮೈಯನ್ನು + ಕೊಡವಿ
   ಡಿ) ಮೈ + ಗೊಡವಿ

**II ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ** **12x1=12**

5. ಯಾವುದು ಇಲ್ಲದಿದ್ದರೆ ದೇಶದ ಆಟವೇ ನಡೆಯದು ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಹೇಳಿದ್ದಾರೆ?
6. ಪುಟ್ಟರಾಜರು ಓದಲು ಮತ್ತು ಬರೆಯುವ ಸಲುವಾಗಿ ಯಾವ ಲಿಪಿ ಕಲಿತರು?
7. ಬಟ್ಟಲಾಕಾರದಲ್ಲಿ ಗೂಡು ಕಟ್ಟುವ ಪಕ್ಷಿಗಳು ಯಾವುವು?
8. ಶಿವರುದ್ರಪ್ಪನವರು ಹೇಳಿರುವಂತೆ ಶಂತುವಿನ ತಂದೆಯ ಹೆಸರೇನು?
9. ಮನೆಗಿಂತ ಯಾವುದು ಸೊಗಸು ಎಂದು ಗೋಪಾಲನು ಹೇಳುತ್ತಾನೆ?
10. ಹಾ,ಮಾ, ನಾಯಕರ ಪ್ರಕಾರ ಮಾನವೀಯ ಸಂಬಂಧ ಯಾವುದನ್ನು ಅಪೇಕ್ಷಿಸುತ್ತದೆ?
11. ಕವಿ ಬಸವರಾಜ ಸಾದರ ಅವರ ಪ್ರಕಾರ ಬೆಲ್ಲ ಬೇವಿಗೆ ಸೇರಿ ಏನಾಗುತ್ತದೆ?
12. ಕವಿ ಮಾನವನ ಬದುಕು ಕರ್ಪೂರದಂತೆ ಇರಬೇಕೆಂದು ಏಕೆ ಹೇಳಿದ್ದಾರೆ?
13. ಸ್ಥಳ ಪುರಾಣದ ಪ್ರಕಾರ ಕುಣಿಗಲ್ ಕೆರೆಯನ್ನು ಕಟ್ಟಿಸಿದ ಚಕ್ರವರ್ತಿ ಯಾರು?
14. ಸಂತೆಯೊಳಗೆ ಮನೆಯ ಮಾಡಿದರೆ ಯಾವುದಕ್ಕೆ ಅಂಜಬಾರದು?
15. ವೇದಾಂತವನ್ನು ಓದಿದವನು ಹೇಗಿರಬೇಕೆಂದು ಸಿದ್ದರಾಮ ಹೇಳುತ್ತಾನೆ?
16. ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **8x2=16**

17. ಸರ್ವಜ್ಞ ಕವಿಯು ಕೃಷಿಯ ಬಗ್ಗೆ ಹೇಳಿರುವ ವಚನ ಯಾವುದು?
18. ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ?
19. ಭಾರತದ ಏಳು ಪ್ರಾಚೀನ ಪವಿತ್ರ ನಗರಗಳು ಯಾವುವು?
20. ಸಮಾಜ ಜೀವನದ ಪ್ರಧಾನ ಲಕ್ಷಣಗಳಾವುವು?
21. 'ಬೊಬ್ಬೆ ಹೊಡೆದಾವೆ ಬಾಳೆ ಮೀನು' ಈ ಸಾಲಿನ ಅರ್ಥವನ್ನು ವಿವರಿಸಿ.
22. ವೇಷ ಆಚರಣೆಯ ಬಗ್ಗೆ ಸಿದ್ಧರಾಮರ ಚಿಂತನೆಯನ್ನು ತಿಳಿಸಿ.
23. ಭೀಮನಾಯಕನು ವೈದ್ಯರ ವಸ್ತುಗಳನ್ನು ಹಿಂತಿರುಗಿಸಿ ಏನೆಂದು ಹೇಳಿದನು?
24. ಕನ್ನಡಿಗರ ಕಾವ್ಯ ರಚನಾ ಶೈಲಿಯನ್ನು ಕವಿಯು ಹೇಗೆ ವರ್ಣಿಸಿದ್ದಾರೆ?

**IV ಕವಿ/ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ** **1x3=3**

25. ರಮೇಶಗೌಡ ಎಂ ಕೆ

**V ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ** **1x3=3**

**26.** ಕಡೆಗೆ ಹಾಯವು ಕಂಗಳೀಬಲ
ಗಡಲ ಮನವೀಸಾಡಲಾರದು
ವೊಡಲುವಿಡಿದಿರಲೇನ ಕಾಣಲು ಬಾರದದ್ಭುತವ
ಪೊಡವಿಯಿದುದೊ ಮೋಹರವನಿದ
ರೊಡನೆ ಕಾದುವನಾವನಾತನೆ
ಮೃಡನು ಶಿವಶಿವ ಕಾದಿಗೆಲಿದೆವು ಬಲಕೆ ನಮೊಯೆಂದ.

**VI ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ** **1x3=3**

27. 'ನೂರಾರು ದೀಪಗಳು ನದಿಯ ಬಟ್ಟೆಗೆ ಬೆಳಕಿನ ಕಸೂತಿ ಹಾಕಿದಂತೆ ಕಾಣುತ್ತಿದ್ದವು'

**VII ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ.** **1x3=3**

**28.** 'ಬೆಳೆಯುವ ಸಿರಿ ಮೊಳಕೆಯಲ್ಲಿ'

ಅಥವಾ

'ತುಂಬಿದ ಕೊಡ ತುಳುಕುವುದಿಲ್ಲ'

**VIII ಕೆಳಗಿನ ವಾಕ್ಯ ಅಥವಾ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **5x3=15**

29. "ಹಲವಾರು ವರ್ಷಗಳಿಂದ ಈ ಮರ ನನಗೆ ಆಶ್ರಯಕೊಟ್ಟಿದೆ"

30. "ನನ್ನ ಕಾಫೀ ಕೂಡ ಚೆನ್ನಾಗಿರುತ್ತದೆ"

31. "ಆ ಮಗುವಿಗೆ ಬಡತನದ ಬವಣೆಯೇಕೆ?

32. "ಚಿಲಿಪಿಲಿಯ ಕಲರವಕೆ ಮತ್ತೇರಿದೆ"

33. "ಸಿಡುಕು-ಮಿಡುಕನು ತೊರೆದು ಮೌನಿಯಾಗು"

**IX ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

34. ಏಕಾಂಗಿ ------------------------------

---------------------------------

---------------------------------

------------------------- ನಡೆದನು.

**ಅಥವಾ**

ಕಾಡು ಕಾಡು -----------------------

-----------------------------------

-----------------------------------

-------------------------- ಕಂಡಿತು

**X ಕೆಳಗಿನ ಪ್ರಶ್ನೆಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1x4=4**

35. ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ

ಅಥವಾ

ಗುರಿ ಪದ್ಯದ ಸಾರಾಂಶವನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ

**XI ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ** **1x4=4(2+2)**

36. ಭಗವಾನ್ ರಮಣ ಮಹರ್ಷಿಗಳು ಭಾರತ ದೇಶದ ಆಧ್ಯಾತ್ಮಿಕತೆಯ ಶಿಖರ. ಅತ್ಯಂತ ಸರಳವಾಗಿ, ಎಲ್ಲರಿಗೂ ತಿಳಿಯುವಂತೆ ವೇದಾಂತವನ್ನು ತಿಳಿಸುವುದು ಅವರಿಗೆ ಸುಲಭ ಸಾಧ್ಯವಾಗಿತ್ತು. ಕೆಲವೊಮ್ಮೆ ವಿಶದವಾಗಿ, ಕೆಲವೊಮ್ಮೆ ಸೂಕ್ತಿಗಳಿಂದ, ಕೆಲವೊಮ್ಮೆ ನಿದರ್ಶನಗಳಿಂದ ಮತ್ತೆ ಕೆಲವು ಬಾರಿ ಮೌನದಿಂದ ಭಕ್ತರ ಸಮಸ್ಯೆಗಳಿಗೆ ಸಮರ್ಪಕ ಉತ್ತರ ನೀಡುತ್ತಿದ್ದರು. ಒಮ್ಮೆ ಅವರು ತೋಟದಲ್ಲಿ ಕುಳಿತಾಗ ಒಂದು ಪರಿವಾರ ಅವರ ಬಳಿ ಬಂದಿತು. ತಂದೆ, ತಾಯಿ, ಏಳೆಂಟು ವರ್ಷದ ಮಗ ಮಹರ್ಷಿಗಳಿಗೆ ಪ್ರಣಾಮ ಮಾಡಿ ಕುಳಿತುಕೊಂಡರು. ತಾಯಿ "ಸ್ವಾಮಿ ನನ್ನ ಮಗನಿಗೆ ಮನಸ್ಸನ್ನು ಏಕಾಗ್ರಗೊಳಿಸುವುದು ಕಷ್ಟವಾಗುತ್ತಿದೆ ತಾವು ಮಾರ್ಗದರ್ಶನ ಮಾಡಬೇಕೆಂದು ಕೇಳಿಕೊಂಡಳು. ಮಹರ್ಷಿಗಳು ಒಂದು ಚೂರು ದೋಸೆಯನ್ನು ತಾವು ತೆಗೆದುಕೊಂಡು ಉಳಿದವುಗಳನ್ನು ಸುತ್ತಮುತ್ತ ಇರುವವರಿಗೆಲ್ಲ ಹಂಚಿದರು. ಇನ್ನು ಆರೇಳು ದೋಸೆಗಳು ತಟ್ಟೆಯಲ್ಲಿ ಉಳಿದಿದ್ದವು.

ಮಹರ್ಷಿಗಳು "ಮಗು ನೀನು ದೋಸೆ ತಿನ್ನುತ್ತಾ ಹೋಗಬೇಕು. ಆದರೆ ನನ್ನ ಬೆರಳನ್ನು ನೋಡುತ್ತಾ ತಿನ್ನಬೇಕು. ನನ್ನ ಎತ್ತಿದ ಬೆರಳು ಮೇಲೆ ಇರುವವರೆಗೂ ತಿನ್ನುತ್ತಲೇ ಇರಬೇಕು ಬೆರಳನ್ನು ಕೆಳಗೆ ಇಳಿಸಿದ ತಕ್ಷಣ ತಿನ್ನುವುದನ್ನು ನಿಲ್ಲಿಸಬೇಕು. ಆಗ ನಿನ್ನ ತಟ್ಟೆಯಲ್ಲಿ ಒಂದು ಚೂರು ದೋಸೆ ಇರಬಾರದು ಎಂದರು. ಹುಡುಗ ತಿನ್ನಲಾರಂಭಿಸಿದ. ಮಹರ್ಷಿಗಳ ಕೈ ಬೆರಳನ್ನು ನೋಡುತ್ತಾ ವೇಗವಾಗಿ ತಿನ್ನುತ್ತಿದ್ದ. ಬೆರಳಿನ ವೇಗ ಹೆಚ್ಚಿದಂತೆ ತಿನ್ನುವ ವೇಗವು ಹೆಚ್ಚುತ್ತಿತ್ತು. ಮಹರ್ಷಿಗಳ ಬೆರಳು ಕೇಳಗಿಳಿಯುತ್ತಿದ್ದಂತೆ ಹುಡುಗನು ತಟ್ಟೆಯಲ್ಲಿದ್ದ ದೋಸೆಯನ್ನು ದೊಡ್ಡ ದೊಡ್ಡ ತುತ್ತುಗಳಲ್ಲಿ ತಿಂದು ಮುಗಿಸಿದ. ಆಗ ಮಹರ್ಷಿಗಳು ಅವನ ಬೆನ್ನು ತಟ್ಟಿ ಹೇಳಿದರು. "ಮಗು ಈಗ ನೀನು ಮಾಡಿದ್ದೇ ಧ್ಯಾನ. ತಿನ್ನುವುದನ್ನು ನೀನು ನಿಲ್ಲಿಸಿರಲಿಲ್ಲ ಆದರೆ ನನ್ನ ಬೆರಳಿನ ಮೇಲಿನ ಕಣ್ಣನ್ನು ತೆಗೆದಿರಲಿಲ್ಲ. ಇದೇ ಧ್ಯಾನಮಯ ಜೀವನ ನಮ್ಮ ಕರ್ತವ್ಯ ಮಾಡುತ್ತಲೇ ಇರಬೇಕು. ಆದರೆ ಭಗವಂತನ ಮೇಲಿನ ಚಿಂತನೆಯನ್ನು ಕ್ಷಣವೂ ಬಿಡಬಾರದು" ಎಂದು ಹೇಳಿದರು.

ಪ್ರಶ್ನೆಗಳು :

ಅ. ಧ್ಯಾನಮಯ ಜೀವನದ ಬಗ್ಗೆ ರಮಣ ಮಹರ್ಷಿಗಳು ಹುಡುಗನಿಗೆ ಹೇಗೆ ಮಾರ್ಗದರ್ಶನ ನೀಡಿದರು ?

ಆ. ರಮಣ ಮಹರ್ಷಿಗಳು ಭಕ್ತರ ಸಮಸ್ಯೆಗಳನ್ನು ಪರಿಹರಿಸುತ್ತಿದ್ದ ಬಗೆಯನ್ನು ತಿಳಿಸಿ.

**XII ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ** **1x4=4**

37 ಯುದ್ಧದಿಂದಾಗುವ ಪರಿಣಾಮಗಳು

**ಅಥವಾ**

ಭಾರತದ ಅಭಿವೃದ್ಧಿಯಲ್ಲಿ ಕೃಷಿಯ ಮಹತ್ವ

**XII ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1x5=5**

38. ನೀವು ಉತ್ತರಕನ್ನಡ ಜಿಲ್ಲೆಯ ಚಂದನಪುರದಲ್ಲಿ ವಾಸವಾಗಿರುವ 'ಮೋಹನ' ಎಂದು ಭಾವಿಸಿಕೊಂಡು ನಿಮ್ಮ ಊರಿನಲ್ಲಿ 'ಜಲಜೀವನ್' ಯೋಜನೆಯ ಅಡಿಯಲ್ಲಿ ಗ್ರಾಮದ ಎಲ್ಲಾ ಮನೆಗಳಿಗೂ ಶುದ್ಧ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡುವಂತೆ ಕೋರಿ, ತಾಲ್ಲೂಕು ಪಂಚಾಯತಿಯ ಅಧ್ಯಕ್ಷರಿಗೆ ಮನವಿ ಪತ್ರ ಬರೆಯಿರಿ

**ಅಥವಾ**

ನೀವು ಕಾರವಾರದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಓದುತ್ತಿರುವ 'ರಮ್ಯಾ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಪೋಷಕರ ಸಭೆಗೆ ಬರುವಂತೆ ಕೋರಿ ಧಾರವಾಡದಲ್ಲಿ ವಾಸವಾಗಿರುವ 'ರಮೇಶ' ಎಂಬ ಹೆಸರಿನ ನಿಮ್ಮ ತಂದೆಗೆ ಪತ್ರ ಬರೆಯಿರಿ.

***********************